"ಬಡವರಿಗೆ ರವಷ್ಟು ಕಮ್ಮಿ ಐತೆ, ಸಾವ್ಕಾರಿಗೆ ರವಷ್ಟ್ ಜಾಸ್ತಿ ಐತೆ."

"(ಬಾಟಲಿ ಮುಚ್ಚಳ ತೆಗೆದು ನೀರು ಕುಡಿದರು) ಆಗ್ಲಿ ಪರವಾಗಿಲ್ಲ, ಜಮೀನಲ್ಲಿ ಸಾಮಾನ್ಯವಾಗಿ ಏನ್ ಬೆಳೆ ಹಾಕ್ತೀರಾ."

"ಎಲ್ಲಿ ಬೆಳೆ ತಗಿರಿ ಸಾ, ಮಳೆ ಬಂದ್ರೆ ಬೆಳೆ ಇಲ್ದಿದ್ರೆ ಬೀಳು."

"ಸರಿಯಮ್ಮಾ, ಮಳೆ ಬಂದ್ರೆ ಏನ್ ಹಾಕ್ತೀರಾ."

"ಅವರವರಿಗೆ ಏನೇನ್ ಬೇಕೋ ಅದು ಬೆಳಕಮ್ತರೆ, ಕೆಲವುರು ರಾಗಿ, ಇನ್ ಕೆಲವುರು ಕಡ್ಲೆ ಕಾಯಿ."

"ಅದೇ ಕಣಮ್ಮ, ರಾಗಿ ಎಷ್ಟು ಜನ, ಕಡ್ಲೆ ಎಷ್ಟು ಜನ ಹಾಕ್ತೀರಾ."

"ನೀರಾವರಿ ಇರೋರು ರಾಗಿ ಹಾಕ್ತರೆ, ದಿನ್ನೆ ಜಮೀನಿಗೆ ಕಡ್ಲೆ ಕಾಯ್ ಹಾಕ್ತರೆ."

ಸಭೆಯಲ್ಲಿ ಗುಜು ಗುಜು ಆರಂಭವಾಯಿತು. ಸೆನ್ಸಸ್ ಮಾಡುವಾತಗೆ ಬೀಪಿ, ಶುಗರ್ರು ಸರ್ರನೆ ಏರಿದವು ಮತ್ತು ಇಳಿದವು. ಮತ್ತೊಂದು ದಿವಸ ಬರುವುದಾಗಿ ಹೇಳಿ ಹೊರಟೇಬಿಟ್ಟರು.

"ಬಡವರಿಗೆ ಏನಾರ ಅನುಕೂಲ ಮಾಡಿಕೊಡ್ರಿ ಸಾ, ಇಷ್ಟಾಕೊಂದು ವಿಸ್ಯಾ ಕೇಳಿದ್ರಿ" ಎಂದಿತು ಪುಲ್ಲಕ್ಕ.

ಬರುತ್ತಿದ್ದ ಸಿಟ್ಟನ್ನು ಹಲ್ಲು ಕಡಿಯುವ ಮೂಲಕ ತಡೆದುಕೊಂಡ ಆತ, "ಹೆಡ್ಡಾಫೀಸಿಗೆ ತಿಳಿಸುವುದಾಗಿ" ಹೇಳಿ ತಿರುಗಿಯೂ ನೋಡದಂತೆ ಹೋಗಿಬಿಟ್ಟರು.

ಆಮೇಲೆ ಗೊತ್ತಾಗಿದ್ದೇನೆಂದರೆ ಆತ ಕಾಂಟ್ರ್ಯಾಕ್ಟ್ ಫಾರ್ಮಿಂಗ್ (ಒಪ್ಪಂದ ಕೃಷಿ) ಮಾಡಿಕೊಳ್ಳಲು ಮಾಹಿತಿ ಸಂಗ್ರಹಕ್ಕೆಂದು ಬಂದಿದ್ದರು. ಅವರನ್ನು ತನಗೇ ಅರಿವಿಲ್ಲದಂತೆ ಪುಲ್ಲಕ್ಕ ಊರಿನಿಂದ ಓಡಿಸಿಬಿಟ್ಟಿದ್ದಳು.

ಒಮ್ಮೆ ಪರಸ್ಥಳದ ಒಬ್ಬರು, "ಇಲ್ಲಿಂದ ಹೊಸ್ಕೆರೆಗೆ ಎಷ್ಟ್ ದೂರ ಆಗುತ್ತೆ" ಎಂದು ಅಡ್ರೆಸ್ ಕೇಳಿದಾಗ ಥಟಕ್ಕನೆ ಈಕೆ, "ಒಂದ್ ಅಡಿಕೆ ಕಡಿಯೋ ಹೊತ್ಗೆ ಹೋಗಬಹುದು ಹೋಗಿ ಸಾಮಿ" ಅಂತಾ ಹೇಳಿಕಳಿಸಿತ್ತು. ಅದನ್ನು ನೆನೆಸಿಕೊಂಡು ಊರವರು ನಕ್ಕಿದ್ದೇ ನಕ್ಕಿದ್ದು. ಗೋಟಡಿಕೆ ಕಡಿಬೇಕೋ ಹಾಲಡಿಕೆ ಕಡಿಬೇಕೋ ಅಂತಾನೂ ಹೇಳದಲ್ಲಾ ಪುಲ್ಲಕ್ಕ ಅಂತ ಕೇಳಿದ್ದೇ ಅಲ್ಲದೆ, ಈವಮ್ಮನ ತಾವ ಅಡ್ರೆಸ್ ಕೇಳಿ ಆ ವ್ಯಕ್ತಿ ಊರು ಸೇರಿದನೋ ಇಲ್ಲವೋ ಅಂತ ಅನುಮಾನವನ್ನೂ ಪಡುತ್ತಿದ್ದರು.

ಬರೀ ಮನುಷ್ಯರ ಜೊತೆಗಷ್ಟೇ ಅಲ್ಲ. ತಮ್ಮ ಮನೆಯಲ್ಲಿದ್ದ ಎಮ್ಮೆ ಪಡ್ಡೆ, ಹೋರಿ ಕರಗಳು, ಕುರಿ ಪಟ್ಲೆ, ಕೊನೆಗೆ ನಾಯಿ ಕುನ್ನಿಯೊಂದಿಗೂ ಸಲೀಸಾಗಿ ಮಾತಾಡುತ್ತಿದ್ದಳು ಪುಲ್ಲಕ್ಕ. ಹೊಸಬರು ಥಟ್ಟಂತ ನೋಡಿದರೆ ಯಾರೊಂದಿಗೋ ಮಾತಾಡುತ್ತಿದ್ದಾಳೆ ಎಂದೇ ಭ್ರಮಿಸಿ ಸುತ್ತಾಮುತ್ತಾ ನೋಡುತ್ತಿದ್ದರು.

ನಮ್ಮ ಬಾವಿ ತುಸು ಇಳಿಜಾರಾಗಿತ್ತು. ಅಲ್ಲಿಗೆ ಒಂದು ಸಲ ತನ್ನ ಎಮ್ಮೆಯನ್ನು ನೀರು ಕುಡಿಸಲು ಬಂದಳು. ಅದು ಬಾವಿಯ ಇಳಿಜಾರು ನೋಡಿ ಇಳಿಯಲು ಹಿಂದೇಟು ಹಾಕಿ ಹಗ್ಗ ಹಿಂದಕ್ಕೆಳೆಯಿತು. "ಅಗ್ಗಳೋ, ನೋಡದಾ ನಿನ್ನ ಪೆಗ್ಗೆನ, ಅಲ್ಲೇನ್ ದೆವ್ವ ಕುಂತೈತಾ, ಸುಮ್ಕೆ ಇಳಿದು ನೀರು ಕುಡಿ" ಎಂದು ಸಮಾಧಾನವಾಗಿ ಹೇಳಿ ಬೆನ್ನ ಮೇಲೆ ಕೈಯಾಡಿಸಿದಳು. ಆದರೂ ಎಮ್ಮೆಗೆ ಧೈರ್ಯ ಸಾಲದೆ ಕೊಂಬು ಅಲ್ಲಾಡಿಸಿತು. ಪುಲ್ಲಕ್ಕನ ವಾಯ್ಸ್ ಜೋರಾಯಿತು. "ಯಾಕಮಣಿ ಇವತ್ತ್ ಹಿಂಗಾಡ್ತಾ ಇದ್ದಿಯಾ, ಒತ್ತಿಲಿಂದ ಮೇವ್ ತಿಂದು ನೀರ್ ಕುಡಿಲಿಲ್ಲಾ ಅಂದ್ರೆ ಹೊಟ್ಟೆ ಗತಿ ಏನಾಗನ, ಕುಡಿತಿಯೋ ತಿಗದ ಮ್ಯಾಲ್ ಬರೆ ಬರಂಗ್ ನಾಲಕ್ ಬಿಗಿಲೋ" ಅಂತ ಹಗ್ಗ ಮಡಿಚಿಕೊಂಡು ಹಿಂಭಾಗದ ಮೇಲೆ ಒಂದೇಟು ಹಾಕಿದಳು. ಒಡತಿಗೆ ಸಿಟ್ಟು ಬಂದಿರುವುದನ್ನು ಖಚಿತಪಡಿಸಿಕೊಂಡ ಎಮ್ಮೆ ನಿಧಾನವಾಗಿ ಇಳಿದು ನೀರು ಕುಡಿಯಿತು.